sdmimd

**Prajaavaani**

Date: Saturday, March 22, 2014 | Page No.3

Edition: Mysore | Language: Kannada

# ಸಮಾಜಕ್ಕೆ ಕರುಣೆ ಅಗತ್ಯವಿದೆ: ಸುಬ್ರೊತೊ

ಮೈಸೂರು: 'ಪ್ರಸ್ತುತ ಸಮಾಜದಲ್ಲಿ ಅಧಿಕಾರ, ಅಂತಸ್ತು ಹಾಗೂ ಸ್ಥಾನಮಾನಗಳಿಗಿಂತ ಹೆಚ್ಚಾಗಿ ಕರುಣೆಯ ಅಗತ್ಯ ಇದೆ' ಎಂದು ಉದ್ಯಮಿ ಸುಬ್ರೊತೊ ಬಗ್ಚಿ ತಿಳಿಸಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ (ಎಸ್‌ಡಿಎಂಐಎಂಡಿ) ಕಾಲೇಜಿನಲ್ಲಿ ಶುಕ್ರವಾರ ನಡೆದ '19ನೇ ವಾರ್ಷಿಕ ಘಟಿಕೋತ್ಸವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜಾಗತೀಕರಣದ ಇಂದಿನ ಯುಗದಲ್ಲಿ ಕೈಗಾರಿಕೆಗಳಿಗೆ, ತಂತ್ರಜ್ಞಾನಗಳಿಗೆ ಆದ್ಯತೆ ಇದೆ. ಜಪಾನಿನ ಪ್ರಧಾನಿಯ ನೆನಪು ಯಾರಿಗೂ ಆಗುವುದಿಲ್ಲ. ಆದರೆ, ಅಲ್ಲಿನ ಐವರು ಪ್ರಸಿದ್ಧ ಕೈಗಾರಿಕೋದ್ಯಮಿಗಳ ನೆನಪು ಇರುತ್ತದೆ' ಎಂದು ಕೈಗಾರಿಕೆಗಳ ಮಹತ್ವ ಕುರಿತು ಮಾತನಾಡಿದರು.

ಮಾರುಕಟ್ಟೆ ಅಧ್ಯಯನ, ಹಣಕಾಸು ಅಧ್ಯಯನ, ಮಾನವ ಸಂಪನ್ಮೂಲ ಹಾಗೂ ಮಾಹಿತಿ ತಂತ್ರಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ಒಟ್ಟು 180 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು.

ವರುಣ್‌ಕುಮಾರ್ ಅವರು ಮೂರು ಚಿನ್ನದ ಪದಕ ಪಡೆದುಕೊಂಡರೆ, ದೀಪಕ್ ನೆಸಾರಿಕರ್, ಟಿ. ವಾಸುದೇವ ನಾಯಕ್, ಸ್ಫೂರ್ತಿ ಎಸ್. ಗೌಡ ಹಾಗೂ ಜ್ಯೋತಿಕಾ ಕಾಮ್‌ದಾರ್ ತಲಾ ಒಂದೊಂದು ಚಿನ್ನದ ಪದಕ ಪಡೆದುಕೊಂಡರು.

ಕಾಲೇಜಿನ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ವಾರ್ಷಿಕ ವರದಿ ಮಂಡಿಸಿದರು. ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಪ್ರೊ.ನೀತು ಗಣಪತಿ, ಎನ್.ರಂಗರಾವ್ ಅಂಡ್ ಸನ್ಸ್ ಸಂಸ್ಥೆಯ ಪಾಲುದಾರ ಆರ್. ಗುರು, ಐಐಎಂ–ಬಿ ನ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಸನ್ನಚಂದ್ರ, ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್. ಪ್ರಭಾಕರ್ ಹಾಗೂ ಇತರರು ಸಮಾರಂಭದಲ್ಲಿ ಹಾಜರಿದ್ದರು.



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ (ಎಸ್‌ಡಿಎಂಐಎಂಡಿ) ಕಾಲೇಜಿನಲ್ಲಿ ಶುಕ್ರವಾರ ನಡೆದ '19ನೇ ವಾರ್ಷಿಕ ಘಟಿಕೋತ್ಸವ' ಕಾರ್ಯಕ್ರಮದಲ್ಲಿ ವರುಣ್‌ಕುಮಾರ್ ಅವರಿಗೆ ಉದ್ಯಮಿ ಸುಬ್ರೊತೊ ಬಗ್ಚಿ ಮೂರು ಚಿನ್ನದ ಪದಕಗಳನ್ನು ವಿತರಿಸಿದರು.